**ಕರ್ನಾಟಕ ಸರ್ಕಾರ**

ಸಂಖ್ಯೆ: ಅಪಜೀ 141 ಎಫ್‌ಎಫ್ 2024

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ, ಬೆಂಗಳೂರು,
ದಿನಾಂಕ:21.02.2026

**ಇವರಿಂದ**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

**ಇವರಿಗೆ,**
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು.

ಮಾನ್ಯರೆ,

**ವಿಷಯ:**- ದಿನಾಂಕ:09.02.2026 ರಂದು ನಡೆದ ಸಭೆಯ ಸಭಾ ನಡವಳಿಗಳಯನ್ವಯ ಕ್ರಮ ಕೈಗೊಳ್ಳುವ ಕುರಿತು.

*****

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ಕ್ರೂಢೀಕೃತ ಅರಣ್ಯ ಭೂಮಿಗಳ ದಾಖಲೆಗಳನ್ನು ಸಿದ್ಧಪಡಿಸಲು ರಚಿಸಲಾಗಿರುವ (Expert Committee) **ಜಿಲ್ಲಾ ಮಟ್ಟದ ಸಮಿತಿಗಳು** (**DLC**) ಮತ್ತು **ಕಂದಾಯ ವಿಭಾಗೀಯ ಮಟ್ಟದ ಸಮಿತಿಗಳು** (**RDLC**) ಈವರೆವಿಗೂ ಸಾಧಿಸಲಾಗಿರುವ ಪ್ರಗತಿಯನ್ನು ಪರಿಶೀಲಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ ಹಾಗೂ ಅಧ್ಯಕ್ಷರು, ರಾಜ್ಯ ಮಟ್ಟದ ಸಮಿತಿ, CRFL ಹಾಗೂ SIT ಇವರ ಅಧ್ಯಕ್ಷತೆಯಲ್ಲಿ ದಿನಾಂಕ:**09.02.2026** ರಂದು ನಡೆದ ಸಭೆಯ ಸಭಾ ನಡವಳಿಯನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ನಡವಳಿಯನ್ವಯ ಮುಂದಿನ ಅಗತ್ಯ ಕ್ರಮ ಕೈಗೊಳ್ಳುವಂತೆ ತಮ್ಮನ್ನು ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

ನಿಮ್ಮ ನಂಬುಗೆಯ,

S. Jalajakshi 21/2/2026
(ಎಸ್.ಜಲಜಾಕ್ಷಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.
(ಅರಣ್ಯ-ಬಿ)

**ಪ್ರತಿಯನ್ನು**:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಬೆಂಗಳೂರು.

4. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮೌಲ್ಯಮಾಪನ, ಕಾರ್ಯಯೋಜನೆ, ಸಂಶೋಧನೆ, ತರಬೇತಿ ಹಾಗೂ ಹವಾಮಾನ ಬದಲಾವಣೆ), ಅರಣ್ಯ ಭವನ, ಬೆಂಗಳೂರು.
5. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಕಾರ್ಯಯೋಜನೆ), ಅರಣ್ಯ ಭವನ, ಬೆಂಗಳೂರು.
6. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಭೂದಾಖಲೆಗಳು), ಅರಣ್ಯ ಭವನ, ಬೆಂಗಳೂರು.
7. ಆಯುಕ್ತರು, ಕಂದಾಯ ಆಯುಕ್ತಾಲಯ, ಬಹುಮಹಡಿ ಕಟ್ಟಡ, 7ನೇ ಮಹಡಿ, ಬೆಂಗಳೂರು.
8. ಆಯುಕ್ತರು, ಭೂಮಾಪನ ಮತ್ತು ಭೂದಾಖಲೆಗಳು, ಕೆ.ಆರ್. ವೃತ್ತ, ಬೆಂಗಳೂರು.
9. ನಿರ್ದೇಶಕರು, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (KSRSAC) ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ದೊಡ್ಡಬೆಟ್ಟಹಳ್ಳಿ, ಬೆಂಗಳೂರು.
10. ಎಲ್ಲಾ ಪ್ರಾದೇಶಿಕ ಆಯುಕ್ತರು.
11. ಎಲ್ಲಾ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು. **ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ರವರ ಕಛೇರಿ ಮುಖಾಂತರ.**
12. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು. **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆಯ ರವರ ಕಛೇರಿ ಮುಖಾಂತರ.**
13. ಎಲ್ಲಾ ಜಿಲ್ಲಾ ಪಂಚಾಯತ್, ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು. **ಸರ್ಕಾರದ ಕಾರ್ಯದರ್ಶಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ರವರ ಕಛೇರಿ ಮುಖಾಂತರ.**
14. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ವಿಭಾಗಗಳು (ಪ್ರಾದೇಶಿಕ/ ವನ್ಯಜೀವಿ). **ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ರವರ ಕಛೇರಿ ಮುಖಾಂತರ.**
15. ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು, ಭೂದಾಖಲೆಗಳು. **ಆಯುಕ್ತರು ಭೂಮಾಪನ ಮತ್ತು ಭೂ ದಾಖಲೆಗಳ ಇಲಾಖೆ ಕಛೇರಿ ಮುಖಾಂತರ,**
16. ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ. **ಸರ್ಕಾರದ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ ರವರ ಕಛೇರಿ ಮುಖಾಂತರ.**
17. ಎಲ್ಲಾ ಜಿಲ್ಲೆಗಳ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು. **ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ರವರ ಕಛೇರಿ ಮುಖಾಂತರ.**

**ಕ್ರೂಢೀಕೃತ ಅರಣ್ಯ ಭೂಮಿಗಳ ದಾಖಲೆಗಳನ್ನು ಸಿದ್ಧಪಡಿಸಲು ರಚಿಸಲಾಗಿರುವ (Expert Committee) ಜಿಲ್ಲಾ ಮಟ್ಟದ ಸಮಿತಿಗಳು (DLC) ಮತ್ತು ಕಂದಾಯ ವಿಭಾಗೀಯ ಮಟ್ಟದ ಸಮಿತಿಗಳು (RDLC) ಈವರೆವಿಗೂ ಸಾಧಿಸಲಾಗಿರುವ ಪ್ರಗತಿಯನ್ನು ಪರಿಶೀಲಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ ಹಾಗೂ ಅಧ್ಯಕ್ಷರು, ರಾಜ್ಯ ಮಟ್ಟದ ಸಮಿತಿ, CRFL ಹಾಗೂ SIT ಇವರ ಅಧ್ಯಕ್ಷತೆಯಲ್ಲಿ ದಿನಾಂಕ:09.02.2026 ರಂದು ಜರುಗಿದ ಸಭೆಯ ಸಭಾ ನಡವಳಿ.**

ಸಭೆಯಲ್ಲಿ ಈ ಕೆಳಕಂಡ ಅಧಿಕಾರಿಗಳು ಹಾಜರಿದ್ದರು:

| ಕ್ರಮ.ಸಂ. | ಅಧಿಕಾರಿ/ಸಿಬ್ಬಂದಿಗಳು |
|---|---|
| 1 | ಶ್ರೀ. ಅಂಜುಮ್ ಪರ್ವೇಜ್ ಭಾ.ಆ.ಸೇ.,<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು. |
| 2 | ಶ್ರೀ. ರಾಜೇಂದ್ರ ಕುಮಾರ್ ಕಠಾರಿಯ ಭಾ.ಆ.ಸೇ.,<br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು. ( VC ಮೂಲಕ) |
| 3 | ಶ್ರೀ ಮನೋಜ್ ಕುಮಾರ್ ಭಾ.ಅ.ಸೇ.,<br>ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು. |
| 4 | ಶ್ರೀ. ರವಿ ಬಿ.ಪಿ ಭಾ.ಅ.ಸೇ.,<br>ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಮೌಲ್ಯಮಾಪನ, ಕಾರ್ಯಯೋಜನೆ, ಸಂಶೋಧನೆ ಹಾಗೂ ಹವಮಾನ ಬದಲಾವಣೆ) ಅರಣ್ಯ ಭವನ, ಬೆಂಗಳೂರು. |
| 5 | ಶ್ರೀಮತಿ. ವನಶ್ರೀ ವಿಪಿನ್ ಸಿಂಗ್ ಭಾ.ಅ.ಸೇ.,<br>ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಕಾರ್ಯ ಯೋಜನೆ) ಅರಣ್ಯ ಭವನ, ಬೆಂಗಳೂರು. |
| 6 | ಶ್ರೀ. ಸಂತೋಷ್ ಕುಮಾರ್ ಭಾ.ಅ.ಸೇ.,<br>ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಭೂ ದಾಖಲೆಗಳು) ಅರಣ್ಯ ಭವನ, ಬೆಂಗಳೂರು. |
| 7 | ನಿರ್ದೇಶಕರು, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (KSRSAC) ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ದೊಡ್ಡಬೆಟ್ಟಹಳ್ಳಿ, ಬೆಂಗಳೂರು. |
| 8 | ಶ್ರೀ ಶಿವಪ್ರಕಾಶ,<br>ಸರ್ಕಾರದ ಉಪ ಕಾರ್ಯದರ್ಶಿ, ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು. |

ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ರವರು ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ, ಇಲಾಖೆ ಮತ್ತು ಅಧ್ಯಕ್ಷರು ರಾಜ್ಯ ಮಟ್ಟದ ಸಮಿತಿ ಹಾಗೂ ರಾಜ್ಯ ಮಟ್ಟದ ತಜ್ಞರ ಸಮಿತಿಯ ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು.

ಮೊದಲಿಗೆ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಕಾರ್ಯಯೋಜನೆ) ರವರು ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ (ಸಿವಿಲ್) ಸಂಖ್ಯೆ: 1164/2023 ಗೆ ಸಂಬಂಧಿಸಿದಂತೆ ಹಾಗೂ ವನ(ಸಂರಕ್ಷಣೆ ಏವಂ ಸಂವರ್ಧನೆ) ಅಧಿನಿಯಮ-1980 (1988 ಹಾಗೂ 2023 ರ ತಿದ್ದುಪಡಿಗಳೊಂದಿಗೆ), ವನ(ಸಂರಕ್ಷಣೆ ಏವಂ ಸಂವರ್ಧನೆ) ನಿಯಮಗಳು-2023 ರ ನಿಯಮ 16(1) ರ ನಿಬಂಧನೆಗಳನುಸಾರ "ಅರಣ್ಯ" ಜಮೀನುಗಳ ಕ್ರೂಢೀಕೃತ ದಾಖಲೆಗಳನ್ನು ಸಿದ್ದಪಡಿಸುವ ಕುರಿತಾಗಿ ಸಂಕ್ಷಿಪ್ತವಾಗಿ ಸಭೆಗೆ ವಿವರಿಸಿದರು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮೌಲ್ಯಮಾಪನ, ಕಾರ್ಯಯೋಜನೆ, ಸಂಶೋಧನೆ, ತರಬೇತಿ ಹಾಗೂ ಹವಾಮಾನ ಬದಲಾವಣೆ) ರವರು ಕ್ರೂಢೀಕೃತ ಅರಣ್ಯ ಭೂಮಿಗಳ ದಾಖಲೆಗಳನ್ನು ಸಿದ್ದಪಡಿಸುವ ಕುರಿತು ಜಿಲ್ಲಾ ಮಟ್ಟದ ಸಮಿತಿಗಳು ಅನುಸರಿಸಬೇಕಿರುವ ಕಾರ್ಯವಿಧಾನಗಳ ಕುರಿತು ವಿಸ್ತಾರವಾಗಿ ವಿವರಿಸಿ ಸದರಿ ಜಿಲ್ಲಾ ಮಟ್ಟದ ಸಮಿತಿಯ ಸದಸ್ಯರುಗಳಿಗೆ ಈಗಾಗಲೇ ಸರಣಿ ತರಬೇತಿಗಳನ್ನು ಅರಣ್ಯ ಇಲಾಖೆಯಿಂದ ನೀಡಿರುವುದರ ಬಗ್ಗೆ ಸಭೆಗೆ ತಿಳಿಸುತ್ತಾ, ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ರಾಜ್ಯದಲ್ಲಿರುವ "ಅರಣ್ಯ" ಜಮೀನುಗಳ ಕ್ರೂಢೀಕೃತ ದಾಖಲೆಗಳನ್ನು ಸಿದ್ದಪಡಿಸುವ ಕಾರ್ಯದ ಪ್ರಗತಿಯ ಕುರಿತು ಕಾಲಮಿತಿಯೊಳಗೆ ಶಪಥ ಪತ್ರವನ್ನು ಸಲ್ಲಿಸಬೇಕಿರುವ ಹಿನ್ನಲೆಯಲ್ಲಿ

i. ಅಧಿಸೂಚಿತ ಅರಣ್ಯ/ಘೋಷಿತ ಅರಣ್ಯಗಳು;
ii. ಸರ್ಕಾರಿ/ಕಂದಾಯ ದಾಖಲೆಗಳಲ್ಲಿ "ಅರಣ್ಯ" ವೆಂದು ದಾಖಲಿಸಲಾಗಿರುವ ಪ್ರದೇಶಗಳು ಹಾಗೂ
iii. "ಅರಣ್ಯದ ಸ್ವರೂಪ ಹೊಂದಿರುವ ಪ್ರದೇಶ" ಗಳ

ಮಾಹಿತಿಯನ್ನು ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದ ಸಹಯೋಗದೊಂದಿಗೆ ಕರ್ನಾಟಕ ಅರಣ್ಯ ಇಲಾಖೆಯಿಂದ ಅಭಿವೃದ್ಧಿಪಡಿಸಲಾಗಿರುವ "Consolidated Record of Forest Lands" (CRFL) ತಂತ್ರಾಂಶದಲ್ಲಿ ದಾಖಲಿಸುವ ಕಾರ್ಯವನ್ನು ಶೀಘ್ರವಾಗಿ ನೆರವೇರಿಸಲು ಎಲ್ಲಾ ಜಿಲ್ಲಾ ಮಟ್ಟದ ಸಮಿತಿಗಳಿಗೆ ತಿಳಿಸಿದರು.

ರಾಜ್ಯದಲ್ಲಿರುವ ಸುಮಾರು 16,000 ಗ್ರಾಮಗಳಲ್ಲಿನ ಸುಮಾರು 7,71,700 ಸ.ನಂ.ಗಳಲ್ಲಿ ವನ(ಸಂರಕ್ಷಣೆ ಏವಂ ಸಂವರ್ಧನೆ) ಅಧಿನಿಯಮ-1980 ರನ್ವಯವಾಗುವುದರ ಬಗ್ಗೆ ಸಭೆಗೆ ವಿವರಿಸುತ್ತಾ, ಪ್ರಸ್ತುತ ಜಿಲ್ಲಾ ಮಟ್ಟದ ಸಮಿತಿಯ ಪ್ರಗತಿಯು ಕ್ಷೀಣಗತಿಯಲ್ಲಿ ಜರುಗುತ್ತಿರುವುದರ ಬಗ್ಗೆ ಸಭೆಯ ಗಮನಕ್ಕೆ ತಂದರು.

ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ರವರು ಅಧಿಸೂಚಿತ ಅರಣ್ಯ/ಘೋಷಿತ ಅರಣ್ಯಗಳು ಹಾಗೂ ಸರ್ಕಾರಿ/ ಕಂದಾಯ ದಾಖಲೆಗಳಲ್ಲಿ "ಅರಣ್ಯ" ವೆಂದು ದಾಖಲಿಸಲಾಗಿರುವ ಪ್ರದೇಶಗಳ ವಿವರ ಮತ್ತು ದಾಖಲಾತಿಗಳನ್ನು ಪರಿಶೀಲಿಸುವ ಕಾರ್ಯವನ್ನು Tabletop exercise ನಲ್ಲಿ ಕೈಗೊಂಡು 15 ದಿನಗಳೊಳಗಾಗಿ ಪೂರ್ಣಗೊಳಿಸಲು ಎಲ್ಲಾ ಜಿಲ್ಲಾ ಮಟ್ಟದ ಸಮಿತಿಗಳಿಗೆ ಸೂಚಿಸಿದರು.

ಮುಂದುವರೆದು, "ಅರಣ್ಯದ ಸ್ವರೂಪ ಹೊಂದಿರುವ ಪ್ರದೇಶ" ಗಳನ್ನು ಪ್ರತ್ಯೇಕವಾಗಿ ಕ್ಷೇತ್ರೀಯವಾಗಿ ಗುರುತಿಸಬೇಕಿರುವುದರಿಂದ ಸದರಿ ಕಾರ್ಯವನ್ನು ಕ್ಷೇತ್ರ ಮಟ್ಟದಲ್ಲಿ ಜಂಟಿ ಮೋಜಣಿ ಕಾರ್ಯ ನಡೆಸಿ, ಅಂತಿಮಗೊಳಿಸಲು ಸಲಹೆ ನೀಡಿದರು.

ಪ್ರತಿ ಜಿಲ್ಲಾ ಮಟ್ಟದ ಸಮಿತಿಗಳು, ಕಂದಾಯ ವಿಭಾಗೀಯ ಮಟ್ಟದ ಸಮಿತಿಗಳು ಹಾಗೂ ರಾಜ್ಯ ಮಟ್ಟದ ಸಮಿತಿಗೆ ಈಗಾಗಲೇ ಪ್ರತ್ಯೇಕವಾಗಿ Login Credentials ಗಳನ್ನು ಸೃಜಿಸಲಾಗಿದ್ದು, ಅಂತಿಮಗೊಳಿಸಲಾಗಿರುವ ಮಾದರಿ ವರದಿಯಂತೆ ಎಲ್ಲಾ ಜಿಲ್ಲಾ ಮಟ್ಟದ ಸಮಿತಿಗಳು ಕ್ರೂಢೀಕೃತ ಅರಣ್ಯ ಭೂಮಿಗಳ ದಾಖಲೆಗಳ ಮಾಹಿತಿಯನ್ನು CRFL ತಂತ್ರಾಂಶದಲ್ಲಿ ನಿಯಮಿತವಾಗಿ ದಾಖಲಿಸಲು ಅವಕಾಶ ಕಲ್ಪಿಸಲಾಗಿರುವುದರ ಕುರಿತು ನಿರ್ದೇಶಕರು, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ರವರು ಸಭೆಗೆ ತಿಳಿಸಿದರು.

ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಕ್ರೂಢೀಕೃತ ಅರಣ್ಯ ಭೂಮಿಗಳ ದಾಖಲೆಗಳನ್ನು ಸಲ್ಲಿಸುವ ಕಾರ್ಯದ ಪ್ರಾಮುಖ್ಯತೆಯನ್ನು ಪರಿಗಣಿಸಿ, ಪ್ರಸ್ತಾಪಿತ ವಿಷಯದ ಪ್ರಗತಿ ಪರಿಶೀಲನೆಯನ್ನು ಮುಂದಿನ ಮಾಹೆಯಲ್ಲಿ ಕೈಗೊಳ್ಳುವುದಾಗಿ ತಿಳಿಸುತ್ತಾ, ಶೀಘ್ರವಾಗಿ ಆಯಾ ಜಿಲ್ಲೆಗಳ ಕ್ರೂಢೀಕೃತ ಅರಣ್ಯ ಭೂಮಿಗಳ ದಾಖಲೆಗಳನ್ನು ಸಲ್ಲಿಸಲು ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಪರಿಸ್ಥಿತಿ ರವರು ಎಲ್ಲಾ ಜಿಲ್ಲಾ ಮಟ್ಟದ ಸಮಿತಿಗಳಿಗೆ ತಿಳಿಸಿದರು.

(ಅಂಜುಮ್ ಪರ್ವೇಜ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಅರಣ್ಯ, ಪರಿಸರ ಮತ್ತು ಜೀವಿಪರಿಸ್ಥಿತಿ ಇಲಾಖೆ

**ಪ್ರತಿಯನ್ನು ಮಾಹಿತಿಗಾಗಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಬೆಂಗಳೂರು.
4. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮೌಲ್ಯಮಾಪನ, ಕಾರ್ಯಯೋಜನೆ, ಸಂಶೋಧನೆ, ತರಬೇತಿ ಹಾಗೂ ಹವಾಮಾನ ಬದಲಾವಣೆ), ಅರಣ್ಯ ಭವನ, ಬೆಂಗಳೂರು.
5. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಕಾರ್ಯಯೋಜನೆ), ಅರಣ್ಯ ಭವನ, ಬೆಂಗಳೂರು.
6. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಭೂದಾಖಲೆಗಳು), ಅರಣ್ಯ ಭವನ, ಬೆಂಗಳೂರು.
7. ಆಯುಕ್ತರು, ಕಂದಾಯ ಆಯುಕ್ತಾಲಯ, ಬಹುಮಹಡಿ ಕಟ್ಟಡ, 7ನೇ ಮಹಡಿ, ಬೆಂಗಳೂರು.
8. ಆಯುಕ್ತರು, ಭೂಮಾಪನ ಮತ್ತು ಭೂದಾಖಲೆಗಳು ಇಲಾಖೆ, ಕೆ.ಆರ್. ವೃತ್ತ, ಬೆಂಗಳೂರು.
9. ನಿರ್ದೇಶಕರು, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (KSRSAC) ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ದೊಡ್ಡಬೆಟ್ಟಹಳ್ಳಿ, ಬೆಂಗಳೂರು.
10. ಎಲ್ಲಾ ಪ್ರಾದೇಶಿಕ ಆಯುಕ್ತರು.
11. ಎಲ್ಲಾ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು.
12. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
13. ಎಲ್ಲಾ ಜಿಲ್ಲಾ ಪಂಚಾಯತ್, ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು.
14. ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ವಿಭಾಗಗಳು (ಪ್ರಾದೇಶಿಕ/ ವನ್ಯಜೀವಿ).
15. ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು, ಭೂದಾಖಲೆಗಳು, ಕಂದಾಯ ಇಲಾಖೆ.
16. ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ.
17. ಎಲ್ಲಾ ಜಿಲ್ಲೆಗಳ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು.